ಶ್ರೀ ಎಸ್. ಆರ್. ಬೊಪ್ಪಾಯಿ.—ನನ್ನ ಮುಂದಿನ ಟರ್ನ್‌ನಲ್ಲಿ ಅದನ್ನು ಸೇರಿಸಿ ಎಂದು ಕೋರುತ್ತೇನೆ.

ಅಧ್ಯಕ್ಷರು.—ಆಯಿತು.

ಶಹಾಪುರಕೆ ೩೦ ಹಾಸಿಗೆಗಳ ಆಸ್ಪತ್ರೆ

೧೯೬ (೪೧೧) **ಶ್ರೀ ಶಿವಶೇಖರ ಗೌಡ ಶಿರವಾಳ (ಶಹಾಪುರ).**—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೩–೮೪ ರಲ್ಲಿ ೩೦ ಹಾಸಿಗೆಗಳಿಂದ ಕೂಡಿದ ಆಸ್ಪತ್ರೆಯೊಂದನ್ನು ಶಹಾಪುರಕ್ಕೆ ಮಂಜೂರು ಮಾಡಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಇದುವರೆವಿಗೂ ಆಸ್ಪತ್ರೆಯನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ? ಹಾಗೂ ಎಂದು ಪ್ರಾರಂಭಿಸಲಾಗುವುದು ?

ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಸಚಿವರು).—

ಅ) —ಇಲ್ಲಾ—

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ವೀರಯ್ಯಸ್ವಾಮಿ (ಶ್ರೀ ಶಿವಶೇಖರ ಗೌಡರ ಪರವಾಗಿ). ಅಧ್ಯಕ್ಷರೇ, ಹೋದವರ್ಷ ಇದೇ ಪ್ರಶ್ನೆಯನ್ನು ನಾನೇ ಕೇಳಿದ್ದೇ, ಆ ಸಂದರ್ಭದಲ್ಲಿ ಈ ವರ್ಷದ ಬಜೆಟ್‌ನಲ್ಲಿ ಅದನ್ನು ಸೇರಿಸುತ್ತೇವೆಂದಿದ್ದರು. ಆದರೆ ಸೇರಿಸಿಲ್ಲ. ಸುಮಾರು ೩೦ ಸಾವಿರ ಜನಸಂಖ್ಯೆ ಇರುವ ಪಟ್ಟಣ ಶಹಾಪುರ. ಇಡೀ ತಾಲ್ಲೂಕಿನಲ್ಲಿ ಬೇರೆಲ್ಲೂ ದೊಡ್ಡ ಆಸ್ಪತ್ರೆ ಇಲ್ಲ. ಆದ್ದರಿಂದ ಬಹಳ ಆಗತ್ಯತೆ ಇದೆ. ಈ ಸಲ ಅದ್ಯತೆ ಮೇಲೆ ಮಂಜೂರು ಮಾಡಿ ಆಸ್ಪತ್ರೆ ಕಟ್ಟಡ ಕಟ್ಟಿಸಿಕೊಡುತ್ತೇವೆ ಎಂದು ಸರ್ಕಾರ ಭರವಸೆ ಕೊಡಲು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಅಲ್ಲಿ ಹಾಲಿ ಇರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕಾದರೆ ೩೫ ಲಕ್ಷ ಬೇಕಾಗುತ್ತದೆ. ಅದಕ್ಕೆ ತಗಲುವ ಈ ವೆಚ್ಚವನ್ನು ಭರಿಸಲು ಜಿಲ್ಲಾಪರಿಷತ್ ಸಾಕಷ್ಟು ಹಣವನ್ನು ಒದಗಿಸಿದ ನಂತರ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು.

ಶ್ರೀ ಎಂ. ವೀರಯ್ಯಸ್ವಾಮಿ.—ಅಲ್ಲಿ ಸಿಬ್ಬಂದಿ ಸಂಬಳಕ್ಕೇ ಹಣವಿಲ್ಲ. ಇನ್ನು ಆಸ್ಪತ್ರೆ ಕಟ್ಟಲು ಹಣ ಎಲ್ಲಿಂದ ಬರುತ್ತದೆ ?

ರಾಮನಗರದಲ್ಲಿ ಅರಣ್ಯಕ ಠಾಣೆ

೧೯೭ (೪೫೧) **ಶ್ರೀ ಆರ್. ವೆಂಕಟರಾಮಯ್ಯ (ಮಾಗಡಿ).** ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಮನಗರ ಟೌನ್ ಪೊಲೀಸ್ ಠಾಣೆ ಮತ್ತು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಯಾದ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರು ಸುಮಾರು ೧೦–೧೫ ವರ್ಷಗಳಿಂದಲೂ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಹೆಡ್ ಕಾನ್ಸ್‌ಟೇಬಲ್‌ರವರು ಸಾರ್ವಜನಿಕರಿಗೆ ಕಿರುಕುಳ ಕೊಟ್ಟ ಬಗ್ಗೆ ಹಾಗೂ ದೂರುಗಳನ್ನು ಸ್ವೀಕರಿಸಲು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ರಫೀದಾರ್ ರವರು ಸಾರ್ವಜನಿಕರಿಗೆ ಕಿರುಕುಳ ಕೊಡುತ್ತಿರುವ ಬಗ್ಗೆ ಹಾಗೂ ದೂರುಗಳನ್ನು ಸ್ವೀಕರಿಸಲು ನಿರಾಕರಿಸುವ ಬಗ್ಗೆ ಇವರ ವಿರುದ್ಧ ತೆಗೆದುಕೊಳ್ಳಲಿರುವ ಕ್ರಮಗಳಾವುವು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು). -

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ನಿಮ್ಮ ಪೋಲಿಸ್ ಡಿಪಾರ್ಟ್‌ಮೆಂಟಿನಲ್ಲಿ ಹೆಡ್ ಕಾನ್‌ಸ್ಟೇಬಲ್, ಡಿವೈಎಸ್‌ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಎಸ್‌ಐಗಳನ್ನು ಟ್ರಾನ್ಸ್‌ಫರ್ ಮಾಡಲು ಏನು ನಿಯಮಗಳಿವೆ ? ಹೆಡ್ ಕಾನ್‌ಸ್ಟೇಬಲನ್ನು ಎಷ್ಟು ವರ್ಷಕ್ಕೆ ವರ್ಗ ಮಾಡುವಿರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೆಡ್ ಕಾನ್‌ಸ್ಟೇಬಲ್ ವರ್ಗಾವಣೆ ಅವಧಿ ೫ ರಿಂದ ೧೦ ವರ್ಷ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ರಾಮನಗರ ಗ್ರಾಮಾಂತರ ಠಾಣೆಯಲ್ಲಿ ನಾರಾಯಣಪ್ಪ ಅನ್ನುವ ಹೆಡ್ ಕಾನ್‌ಸ್ಟೇಬಲ್ ೮ ವರ್ಷದಿಂದ ಒಂದೇ ಕಡೆ ಇದ್ದಾನೆ. ಅವನಿಗೆ ಯಾವ ನಿಯಮಾನೂ ಅನ್ವಯಿಸಿಲ್ಲ. ಬೇಕಾದಷ್ಟು ಆಸ್ತಿ ಮಾಡಿಕೊಂಡು ಮನೆ ಕಟ್ಟಿಕೊಂಡು ಮಜಾ ಮಾಡುತ್ತಿದ್ದಾನೆ. ಅವನ ವಿರುದ್ಧ ಏಕೆ ಆಕ್ಷನ್ ತೆಗೆದುಕೊಂಡಿಲ್ಲ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಳಸೇ ಇಸವಿಯವರೆಗೂ ಅಲ್ಲೇ ಇದ್ದರು ಅವರು. ೨ ವರ್ಷ ಹೊರಕ್ಕೆ ಹೋಗಿ ಆಮೇಲೆ ಬಂದಿದ್ದಾರೆ. ಅದನ್ನೂ ಸೇರಿಸಿದರೆ ಅತನ ಸರ್ವಿಸ್ ೧೦ ವರ್ಷವಾಗುತ್ತದೆ. ಸೇರಿಸದೇ ಇದ್ದರೆ ಇನ್ನೂ ಆಗಿರುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅವನ ದುರಾಡಳಿತ ಹೇಗೆ ನಡೆದಿದೆ ಎಂದರೆ ಕಂಪ್ಲೇಂಟ್ ದಾರನು ಬಂದರೆ ೫೦ ರೂ. ಕೀಳುತ್ತಾನೆ, ಆರೋಪಿ ಬಂದರೆ ೨೦೦ ಕೀಳುತ್ತಾನೆ. ಹೀಗೆ ೧೦ ವರ್ಷದಿಂದ ಇದ್ದಾನೆ. ಒಂದೇ ಕಡೆ ಇಂಥವರನ್ನು ಇರಲು ಬಿಟ್ಟರೆ ಏನೇನು ಅನಾಹುತವಾಗುತ್ತವೆಂದು ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲವೆ ? ಈಗಲಾದರೂ ಅವನನ್ನು ಟ್ರಾನ್ಸ್‌ಫರ್ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಟ್ರಾನ್ಸ್‌ಫರ್ ಸಮಯದಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಶ್ರೀ ಎ. ಕೃಷ್ಣಪ್ಪನವರ ೧೯೮ರ ಪ್ರಶ್ನೆ ಮುಂದೆ ಹೋಗಿದೆ. ಸಚಿವರು ಟೈಮ್ ಕೇಳಿದ್ದಾರೆ.